ಟಿ.ಎಂ. ವಿಜಯ ಭಾಸ್ಕರ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
**T.M. VIJAY BHASKAR, I.A.S.**
Principal Secretary to Government

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
Karnataka Government Secretariat
Rural Development & Panchayat Raj Department

ಅ.ಸ. ಪತ್ರ ಸಂ.ಗ್ರಾಅಪ 139 ಜಿಪಸ 2012(ಪಿ-3) ದಿನಾಂಕ 05.10.2013

ಮಾನ್ಯರೆ, **ಅತ್ಯಂತ ಜರೂರು**

**ವಿಷಯ:** ರಾಜೀವ ಗಾಂಧಿ ಪಂಚಾಯತಿ ಸಶಕ್ತೀಕರಣ ಅಭಿಯಾನ ಯೋಜನೆಯಲ್ಲಿ ಜಿಲ್ಲಾ ಪಂಚಾಯತ್ ಸಂಪನ್ಮೂಲ ಕೇಂದ್ರ ಸ್ಥಾಪಿಸುವ ಕುರಿತು.

**ಉಲ್ಲೇಖ:** 1. ದಿನಾಂಕ 17.08.2013 ರ ಸರ್ಕಾರದ ಇ-ಮೇಲ್ ಸಂದೇಶ.
2. ಸಮ ಸಂಖ್ಯೆಯ ಅರೆ ಸರ್ಕಾರಿ ಪತ್ರ ದಿನಾಂಕ: 19.08.2013

******

ಸ್ಥಳೀಯ ಸರ್ಕಾರಗಳೆಂದು ಗುರುತಿಸಲಾಗಿರುವ ಪಂಚಾಯತ್ ರಾಜ್ ಸಂಸ್ಥೆಗಳನ್ನು ಆಡಳಿತಾತ್ಮಕವಾಗಿ ಸದೃಢಗೊಳಿಸಿ, ಗ್ರಾಮೀಣ ಜನತೆಯ ಆಶೋತ್ತರಗಳಿಗೆ ಹಾಗೂ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸಿ ಉತ್ತಮ ಸೇವೆಯನ್ನು ನೀಡುವ ನಿಟ್ಟಿನಲ್ಲಿ ಪಂಚಾಯತಿರಾಜ್ ಸಂಸ್ಥೆಗಳನ್ನು ಆಡಳಿತಾತ್ಮಕವಾಗಿ ಸದೃಢಗೊಳಿಸಲು ಕೇಂದ್ರ ಪುರಸ್ಕೃತ ಯೋಜನೆಯಾದ "ರಾಜೀವ ಗಾಂಧಿ ಪಂಚಾಯತ್ ಸಶಕ್ತೀಕರಣ ಅಭಿಯಾನ ಯೋಜನೆ"ಯನ್ನು ಜಾರಿಗೊಳಿಸಲಾಗಿದೆ.

ಈ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯದ ಪ್ರತಿ ಜಿಲ್ಲಾ ಪಂಚಾಯತಿ ಕೇಂದ್ರದಲ್ಲಿ ತಲಾ ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು 'ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರ (ಡಿ.ಪಿ.ಆರ್.ಸಿ)' ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಂಬಂಧವಾಗಿ ಭಾರತ ಸರ್ಕಾರವು ನಮ್ಮ ಪ್ರಸ್ತಾವನೆಯನ್ನು ಒಪ್ಪಿಕೊಂಡಿರುತ್ತದೆ. ಈ ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರದ ಕಟ್ಟಡ ಹಾಗೂ ಮೂಲಭೂತ ಸೌಲಭ್ಯಗಳಿಗಾಗಿ ಜಿಲ್ಲಾ ಕೇಂದ್ರದಲ್ಲಿ ಪ್ರದೇಶವು ಅವಶ್ಯಕವಾಗಿರುತ್ತದೆ.

ಬಹುಮಹಡಿ ಕಟ್ಟಡ, 3ನೇ ಮಹಡಿ, 3ನೇ ಗೇಟ್, ಬೆಂಗಳೂರು-560 001. M.S. Building, 3rd Floor, Gate No. 3, Bangalore-560 001.
Tel. : 080-2235 3929 / 2203 2446 Fax : 080 - 2235 3927
e-mail: prsrdpr@karnataka.gov.in / principalsecretaryrdpr@gmail.com Website : www.rdpr.kar.nic.in

ಜಿಲ್ಲಾ ಪಂಚಾಯತಿ ಸಂಪನ್ಮೂಲ ಕೇಂದ್ರ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳದ ಕುರಿತು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಉಲ್ಲೇಖಿತ ಇ-ಮೇಲ್ ಸಂದೇಶ ಹಾಗೂ ಅರೆ ಸರ್ಕಾರಿ ಪತ್ರದಲ್ಲಿ ತಿಳಿಸಲಾಗಿತ್ತು. ಈವರೆವಿಗೂ ತಮ್ಮಿಂದ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತವಾಗಿರುವುದಿಲ್ಲ.

ಅದ್ದರಿಂದ ತಮ್ಮ ಜಿಲ್ಲಾ ಪಂಚಾಯತಿಯ ಹತ್ತಿರ ಸ್ಥಳ ಲಭ್ಯವಿರುವ ಬಗೆಗಿನ ಸಂಪೂರ್ಣ ವಿವರಗಳನ್ನು ತಕ್ಷಣ ಸರ್ಕಾರಕ್ಕೆ ಕಳುಹಿಸಿಕೊಡಬೇಕು. ಒಂದು ವೇಳೆ ಮೇಲೆ ತಿಳಿಸಿದ ಜಿಲ್ಲಾ ಪಂಚಾಯತಿಯ ಹತ್ತಿರ ನಿವೇಶನವಿರದಿದ್ದರೆ, ಜಿಲ್ಲಾ ಕೇಂದ್ರದ ಸಮೀಪ ಲಭ್ಯವಿರುವ ನಿವೇಶನದ ಸ್ಥಳ, ಅದರ ಸರ್ವೆ ನಂ, ಆರ್.ಟಿ.ಸಿ ಹಾಗೂ ಆ ಸ್ಥಳದ ಒಡೆತನದ ಬಗೆಗಿನ ಪೂರ್ಣ ವಿವರಗಳೊಂದಿಗೆ ಕೂಡಲೇ ಸಂಪೂರ್ಣ ಪ್ರಸ್ತಾವನೆಯನ್ನು ಮರು ಫ್ಯಾಕ್ಸ್‌ನಲ್ಲಿ ಅಥವಾ ಇ-ಮೇಲ್‌ನಲ್ಲಿ (080-22353925 (sozp.11@gmail.com / pr.kar@nic.in) ಸರ್ಕಾರಕ್ಕೆ ಸಲ್ಲಿಸುವಂತೆ ಕೋರಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್**
ಬೆಂಗಳೂರು ಗ್ರಾಮಾಂತರ, ಗುಲ್ಬರ್ಗಾ,
ಚಾಮರಾಜನಗರ, ರಾಮನಗರ,
ಬೆಳಗಾವಿ, ಧಾರವಾಡ, ಚಿಕ್ಕಬಳ್ಳಾಪುರ,
ಕೊಪ್ಪಳ, ದಕ್ಷಿಣ ಕನ್ನಡ,
ಹಾವೇರಿ, ಮಂಡ್ಯ, ರಾಯಚೂರು,
ಕೊಡಗು, ಹಾಸನ, ಮೈಸೂರು ಹಾಗೂ ತುಮಕೂರು.